ಡಾ.ಭೀಮಣ್ಣ ಘನಾಥೆ

ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ

ಕಲಬುರಗಿ

# ಭಾರತದ ವಿಭಜನೆ

1. ಪೀಠಿಕೆ.
2. ಕಾರಣಗಳು.
3. ಘಟನೆಗಳು.
4. ಪರಿಣಾಮಗಳು.
5. ಉಪಸಂವಾರ.

೧.) ಪೀಠಿಕೆ. ;- ಭಾರತದ ವಿಭಜನೆ ಎಂದರೆ, ಬ್ರಿಟಿಷರು ಸ್ವಾತಂತ್ರ್ಯ ಯ ಕೊಟ್ಟ ಮೇಲೆ ದೇಶವು ಭಾರತ ಮತ್ತು ಪಾಕಿಸ್ತಾನ ಎಂದು ಎರಡು ದೇಶಗಳಾಗಿ ಹೊಂದಿದ ವಿಭಜನೆ. " ಭಾರತದಲ್ಲಿ ಇಸ್ಲಾಂ ದುರಂತದಲ್ಲಿದೆ. ಇಸ್ಲಾಮ್ ಮತ್ತು ಹಿಂದು ಸಂಸ್ಕೃತಿಗಳು ಸಂಪೂರ್ಣ ಭಿನ್ನವಾಗಿದ್ದು , ಯಾವ ವಿಷಯದಲ್ಲಿಯೂ ಸಾಮಾತ್ಯೆ ಎಂಬುವದಿಲ್ಲ. ಮುಂದೆ ಬಹುಸಂಖ್ಯಾತ ಹಿಂದೂಗಳ ಸರಕಾರ ರಚನೆಯಾಗಿ ಅಲ್ಪಸಂಖ್ಯಾರಾದ ಮುಸ್ಲೀಮರು
ಅವರ ದಬ್ಬಾಳಿಕೆಗೆ ಒಳಗಾಗಬಹುದು. ಅಲ್ಲದೇ ಹಿಂದೂಗಳು ಶೈಕ್ಷಣಿಕವಾಗಿ ಮುಸ್ಲೀಮರಿಗಿಂತ ಮುಂದಿದ್ದುಅವರೊ0ದಿಗೆ ಸ್ಪರ್ಧಿಸಲು ಸಾದ್ಯವಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವೆಂದರೆ ಭಾರತದ ವಿಭಜನೆ ಮಾತ್ರ ಎಂದು ಮಹಮ್ಮದ ಅಲಿ ಜಿನ್ನಾ, ಮಹಮ್ಮದ ಇಕ್ಬಾಲ, ಲಿಯಾಖತ್ ಅಲಿ ಖಾನ ಇನ್ನೂ ಮುಂತಾದವರು , ಮುಸ್ಲಿಮರಿಗೆ ಪರಿಹಾರವೆಂದರೆ ಪಾಕಿಸ್ತಾನದ ಸೃಷ್ಟಿ ಎಂಬ ಹೋರಾಟ ಅಂತಿಮವಾಗಿ ಭಾರತದ ವಿಭಜನೆಗೆ ಕಾರಣವಾಯಿತು. ಈ ವಿಭಜನೆಗೆ ಕಾರಣವಾದ ಅಂಶಗಳು ಈ ಕೆಳಗಿನಂತಿವೆ.

೧. ಬ್ರಿಟಿಷರ ಒಡೆದು ಆಳುವ ನೀತಿ.
೨. ಕಾಂಗ್ರೇಸನ ತೃಪ್ತಿ ಪಡಿಸುವ ನೀತಿ.
೩. ಮುಸ್ಲೀಮ್ ಲೀಗ್‌ನ ಕಾರ್ಯಚಟುವಟಿಗೆಗಳು.
೪. ಹಿಂದು ಮಹಾಸಭಾದ ಪಾತ್ರ.
೫. ಜಿನ್ನಾರ ಹಟಮಾರಿತನ.
೬. ೧೯೪೬ ರ ಕ್ಯಾಬಿನೆಟ ಆಯೋಗ
೭. ೧೯೪೬ ರ ಮಧ್ಯಂತರ ಸರಕಾರ.
೮. ಕೋಮು ಪ್ರತಿಕ್ರಿಯೆ.
೯. ೧೯೪೭ ಫೆಬ್ರವರಿಯಲ್ಲಿ ಆ್ಯಟ್ಲಿಯವರ ಘೋಷಣೆ.
೧೦. ಲಾರ್ಡ ಮೌಂಟ ಬ್ಯಾಟನ್ ರವರ ಯೋಜನೆ.

**೧.) ಬ್ರಿಟಿಷರ ಒಡೆದು ಆಳುವ ನೀತಿ.**

೧೮೫೭ ರ ಮಹಾದಂಗೆಯು "ಭಾರತದಲ್ಲಿ ಹಿಂದುಗಳು ಮತ್ತು ಮುಸ್ಲಿಂರು ಒಂದುಗೂಡಿದರೆ ಅದ್ಭುತ-ಸಾದನೆ ಮಾಡಬಹುದು." ಎಂದು ತೋರಿಸಿಕೊಟ್ಟಿತ್ತು . ಆದರೆ ಬ್ರಿಟಿಷರು ತಮಗೊದಿಗಿದ ಸಂಧಿಗ್ಧ ಸ್ಥಿತಿಯ ಕಟುತರವಾದ ಪಾಠಗಳನ್ನು ಎಂದಿಗೂ ಮರೆಯುವಂತಿರಲಿಲ್ಲ. ಹೀಗಾಗಿ ತಮ್ಮ ಸಾಮ್ರಾಜ್ಯಕ್ಕೆ ಎದುರಾದ ಮುಸ್ಲಿಂ ಅಪಾಯವನ್ನು ಎದುರಿಸಲು ದ್ವಿಮುಖವಾದ ರಣನೀತಿ ಕೈಗೊಳ್ಳುವದು ಅನಿವಾರ್ಯವೆಂಬುವದು ಅವರಿಗೆ ಮನದಟ್ಟಾಗಿತ್ತು.ಅವರು ಮುಸಲ್ಮಾನರನ್ನು ತಮ್ಮೆಡೆಗೆ ಸೆಳೆಯುತ್ತಾ ಹಿಂದುಗಳ ವಿರುದ್ಧ ಅವರನ್ನು ಎತ್ತಿಕಟ್ಟುವ ಹೊಸ ಧೋರಣೆಗೆ ಕೈ ಇಟ್ಟರು. ಬ್ರಿಟಿಷರು ತಮ್ಮನ್ನು ಒಡೆದು ಆಳುವ ನೀತಿ-ತಂತ್ರವನ್ನು ರಚನಾತ್ಮಕವಾಗಿ, ಆದಷ್ಟು ನಿಷ್ಠುರವಾಗಿ, ಲೆಕ್ಕಾಚಾರಪೂರ್ವಕವಾಗಿ, ಮುಂದುವರಿಸುತ್ತಾ ಹೋದರು.

೧. ೧೮೭೫ ರಲ್ಲಿ ಸ್ಥಾಪನೆಯಾದ ಮಹಮ್ಮದಿಯನ್ ಆಂಗ್ಲೂ ಓರಿಯಂಟಲ್ ಕಾಲೇಜ. ಮತ್ತು ಅಲ್ಲಿಯ ಪ್ರಾಂಶುಪಾಲ ಥಿಯೋಡರ ಬೆಕ್ ಮುಸ್ಲೀಮರಲ್ಲಿ ಪ್ರತ್ಯೇಕತೆಯ ಭಾವನೆ ಮೂಡಿಸಿದ್ದು ಮತ್ತು ೧೯೨೦ ರಲ್ಲಿ ಅಲಿಘಡ ಮುಸ್ಲಿಮ್ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿದ್ದು

೨. ೧೮೬೭ ರಲ್ಲಿ ಲಾಡ್ಮ್ಯಾಮಿಲ್ಟನ್‌ರು ವೈಸ್‌ರಾಯ್ ಎಲ್ಗಿನ್‌ಗೆ ಬರೆದ ಈ ಪತ್ರ

೩. ೧೯೦೫ ರಲ್ಲಿ ಲಾರ್ಡ ಕರ್ಜನ್ ಬಂಗಾಳವನ್ನು ಕೋಮು ಆದಾರದ ಮೇಲೆ ವಿಭಜನೆ ಮಾಡಲು ಪ್ರಯತ್ನ.

೪. ೧೯೦೯ ರಲ್ಲಿ ಮುಸ್ಲಿಮ್ ರಿಗೆ ಶಾಸನ ಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ನೀಡಿದ್ದು.

೫. ೧೯೧೯ ರ ಕಾಯ್ದೆಯಲ್ಲಿ ಭಾರತದ ಭಾರತದ ಕೌನ್ಸಿಲ್ ವೈಸ್ ರಾಯ್ ಕಾರ್ಯಂಗ ಸಭೆಯಲ್ಲಿ ಮುಸ್ಲೀಮರಿಗೆ ಪ್ರತ್ಯೇಕ ಸ್ಥಾನ ನೀಡಿದ್ದು. ಹೀಗೆ ಅನೇಕ ರೀತಿಯಲ್ಲಿ ಒಡೆದು ಆಳುವ ನೀತಿಯನ್ನು ರಚನಾತ್ಮಕವಾಗಿ ರೂಪಿಸಿದ್ದು

**೨.) ಕಾಂಗ್ರೇಸನ ತೃಪ್ತಿ ಪಡಿಸುವ ನೀತಿ.**

1. ಭಾರತೀಯ ರಾಷ್ಟ್ರೀಯ ಕ್ಯಾಂಗ್ರೇಸಿನ ಕೇಲ ತೀವ್ರಗಾಮಿ ನಾಯಕರಾದ ಬಾಲ ಗಂಗಾಧರ ತಿಲಕರು ಗಣೇಶ, ದುರ್ಗಾ ಮತ್ತು ಶಿವಾಜಿ ಉತ್ಸವಗಳನ್ನು ಜಾರಿಗೆ ತಂದದ್ದು. ರಾಮರಾಜ್ಯದ ಕಲ್ಪನೆಯ ರಾಷ್ಟ್ರ ಎಂದು ಪ್ರಚಾರ ಪಡಿಸಿದ್ದು.
2. ಖಿಲಾಫತ್ ಚಳುವಳಿಯನ್ನು ತನ್ನದಾಗಿಸಿದ್ದು.
3. ಮುಸ್ಲೀಮರ ಬಗ್ಗೆ ಉದಾರ ನೀತಿ ತೃಪ್ತಿ ಪಡಿಸುವ ನೀತಿಯನ್ನು ಅನುಸರಿಸಿದ್ದು
4. ೧೯೧೬ ರಲ್ಲಿ ಲಕ್ನೊ ಒಪ್ಪಂದಕ್ಕೆ ಸಹಿಹಾಕಿದ್ದು.
5. ಮುಂದೆ ಈಡೇರಿಸಲಾಗದ ಬೇಡಿಕೆಗಳನ್ನು ಮುಸ್ಲೀಮನ್ನು ತೃಪ್ತಿ ಪಡಿಸಲು ಅಶ್ವಾಸನೆ ನೀಡಿದ್ದು
6. ೧೯೩೨ ರಲ್ಲಿ ಕಮ್ಯುನಲ್ ಅವಾರ್ಡನ್ನು ಒಪ್ಪಿಕೊಂಡಿದ್ದು

**೩.) ಮುಸ್ಲೀಮ್ ಲೀಗ್‌ನ ಕಾರ್ಯಚಟುವಟಿಗೆಗಳು.**

೧೯೦೬ ರಲ್ಲಿ ಡಾಕಾದ ನವಾಬ್ ಸಲೀಮುಲ್ಲಾಖಾನ್ "ಮುಸ್ಲೀಮ್ ಲೀಗ್ " ಎಂಬ ಪಕ್ಷದ ಸ್ಥಾಪನೆ ಮಾಡಿದನು. ಇದು ಪ್ರಾರಂಬದಲ್ಲಿ ಇಸ್ಲಾಮ್ ಧರ್ಮೀಯರಿಗೆ ಹೆಚ್ಚು, ಹೆಚ್ಚು ರಾಜಕೀಯ ಸವಲತ್ತುಗಳನ್ನು ಪಡೆಯುವ ಉದ್ದೇಶ ಹೊಂದಿತ್ತು. ಮುಂದೆ ಭಾರತೀಯ ಮುಸ್ಲೀಮ್ ರಲ್ಲಿ ಕೋಮು ಭಾವನೆ ಬೆಳೆಸಲಾರಂಬಿಸಿತು.

" ಸಾರೆ ಜಹಾಸೇ ಅಚ್ಚ, ಹಿಂದುಸ್ಥಾನ ಹಮಾರ." ಎಂದು ಗೀತೆ ಬರೆದು ಪ್ರಚಾರ ಮಾಡಿದ್ದ ಮಹಮ್ಮದ್ ಇಕ್ಬಾಲ್‌ರು ೧೯೩೦ ರಲ್ಲಿ ಪ್ರಥಮ ಬಾರಿಗೆ ಮುಸ್ಲೀಮ್ ರಾಷ್ಟ್ರದ ಉಗಮದ ಸ್ಪಷ್ಟ ರೂಪವನ್ನು ಗುರುತಿಸಿದನು. ಮಹಮ್ಮದ ಅಲಿಜಿನ್ನಾ ಮುಸ್ಲೀಂ ಲೀಗ್ ಸೇರಿದ ಮೇಲೆ ಇದರ ಚಟುವಟಿಕೆಗಳು ತೀವ್ರ ಗೊಂಡವು. ೧೯೩೩ ರಲ್ಲಿ ರಹಮತ್ ಅಲಿ ಪಂಜಾಬ, ಅಫಘಾನ್, ಕಾಶ್ಮೀರ, ಸಿಂದ್, ಮತ್ತು ಬಲೂಚಿಸ್ಥಾನಗಳನ್ನು ಮುಸ್ಲೀಮ್ ರ ಮಾತೃ ಭೊಮಿ ಎಂದು, ಮೊದಲ ನಾಲ್ಕು ಪ್ರಾಂತಗಳ ಮೊದಲ ಅಕ್ಷರ ಮತ್ತು ಐದನೇ ಪ್ರಾಂತದ ಕೊನೆಯ ಅಕ್ಷರಗಳನ್ನು ಸೇರಿಸಿ, "ಪಾಕಿಸ್ತಾನ " ಎಂದು ಕರೆದನು. ೧೯೩೮ರಲ್ಲಿ ಕರಾಚಿಯಲ್ಲಿ ನಡೆದ ಮುಸ್ಲೀಮ್ ಲೀಗ್‌ನ ರಾಷ್ಟ್ರೀಯ ಅಧಿವೇಶನದಲ್ಲಿ ಹಿಂದು ಭಾರತ ಮತ್ತು ಮುಸ್ಲೀಮ್ ಭಾರತ ಎಂಬ ಪ್ರತ್ಯೇಕ ರಾಷ್ಟ್ರ ರಚಿಸುವ ಗೊತ್ತುವಳಿ ಅಂಗಿಕರಿಸಿತು.

೧೯೩೯ ರಲ್ಲಿ ಲಕ್ನೋ ಅಧಿವೇಶದಲ್ಲಿ ಮುಸ್ಲೀಮ್ ಲೀಗ್‌ನ್ನು ಕಾಂಗ್ರೇಸ್ ಗೆ ಸಮನಾವಾದ ಪಕ್ಷವೆಂದು ಅಂಗೀಕರಿಸಬೆ0ದು ಒತ್ತಾಯಿಸಿತು. ೧೯೪೦ ರಲ್ಲಿ ಪ್ರತ್ಯೇಕ ಪಾಕಿಸ್ತಾನದ ರಚಿಸುವ ನಿರ್ಣಯ ಮಾಡಿತು ನಂತರದಲ್ಲಿ "ನೇರ ಕಾರ್ಯಚರಣೆ " ಯ ಹೆಸರಿನಲ್ಲಿ ಹಿಂಸಾಚಾರಕ್ಕೆ ಇಳಿಯಿತು.

**೪.) ಹಿಂದು ಮಹಾಸಭಾದ ಪಾತ್ರ.**

೧೯೦೬ ರಲ್ಲಿ ಮುಸ್ಲೀಮ್ ಲೀಗ್‌ನ ಸ್ಥಾಪನೆಯ ನಂತರ ಹಿಂದೂಗಳ ಸನಾತನ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿ, ಅಖಂಡ ಭಾರತವನ್ನು ನಿರ್ಮಿಸುವ ಉದ್ದೇಶದಿಂದ ೧೯೦೯ ರಲ್ಲಿ "ಹಿಂದೂ ಮಹಾಸಭಾ " ಎಂಬ ಎಂಬ ಸಂಘಟನೆಯನ್ನು ಯು.ಎನ್. ಮೂಖರ್ಜಿ ಮತ್ತು ಲಾಲಚಂದರು ಸ್ಥಾಪಿಸಿದರು. ೧೯೧೮ ರಲ್ಲಿ ದೆಹಲಿಯಲ್ಲಿ ನಡೆದ ಹಿಂದೂ ಮಹಾಸಭಾದ ಅಧಿವೇಶದಲ್ಲಿ ಕೇರಳದ ಮಲಬಾರಿನಲ್ಲಿ ಮುಸ್ಲಿಮರು ನಡೆಸಿದ ದೌರ್ಜನ್ಯವನ್ನು ಖಂಡಿಸಿತು. ಮುಂದೆ ವಿ.ಡಿ.ಸಾವರ್ಕರ ನೇತೃತ್ವದಲ್ಲಿ ಹಿಂದೂ ಮಹಾಸಭಾ ಪ್ರಭಲ ಸಂಘಟನೆಯಾಗಿ ಬೆಳೆಯಿತು. ಮುಂದೆ ಹಿಂದೂ ಮಹಾಸಭಾ ಕೈಗೊಂಡ ಕಾರ್ಯಕ್ರಮಗಳಿಂದ ಮುಸ್ಲೀಮ್ ರಲ್ಲಿ ಭಯ ಉಂಟಾಗಿ ತಾವು ಪ್ರತ್ಯೇಕ ರಾಷ್ಟ್ರ ಹೊಂದುವದೇ ಉತ್ತಮ ಎಂಬ ಭಾವನೆ ಅಧಿಕವಾಯಿತು.

**೫.) ಜಿನ್ನಾರ ಹಟಮಾರಿತನ.**

ಮಹಮ್ಮದ ಅಲ ಜಿನ್ನಾ ಆರಂಬದಲ್ಲಿ ರಾಷ್ಟ್ರೀಯವಾದಿಯಾಗಿದ್ದು. ಮುಸ್ಲೀಮ್ ಸಂಪ್ರದಾಯದ ಬಗ್ಗೆ ಅಸಹನೆ ಹೊಂದಿದ್ದನು. ಗಾಂದೀಜಿಯವರು ಬರುವದಕ್ಕಿಂತ ಮೊದಲೇ ಕಾಂಗ್ರೇಸಿನ ಸದಸ್ಯನಾಗಿದ್ದನು. ಗಾಂಧೀಜಿಯ ಖಾದಿ, ಸ್ವದೇಶಿ, ಮತ್ತು ರಾಮರಾಜ್ಯ ಎಂಬ ವಿಚಾರದ ಬಗ್ಗೆ ಅಸಹನೆ ಹೊಂದಿದ್ದನು. ರಾಜಕೀಯದಲ್ಲಿ ಧರ್ಮ ಬೆರಸಬಾರದೆಂಬ ವಿಚಾರ ಹೊಂದಿದ್ದನು. ಆದರೆ ಮುಸ್ಲೀಮ

ಕೋಮುವಾದಿಗಳಾದ ಮಹಮ್ಮದ ಅಲಿ ಮತ್ತು ಶೌಕತ್ ಅಲಿಯವರ ಖಿಲಾಫತ್ ಚಳುವಳಿಗೆ ಗಾಂಧೀಜಿ ಬೆಂಬಲ ನೀಡಿದ್ದರಿಂದ ಬೇಸತ್ತ ಜಿನ್ನ ಕಾಮಗ್ರೇಸ ತೋರೆದು ಇಂಗ್ಲೇ0ಡಿಗೆ ಹೋಗಿ ವಕೀಲ ವೃತ್ತಿಯಲ್ಲಿ ತೋಡಗಿಕೊಂಡರು. ೧೯೩೦ ರಲ್ಲಿ ಜವಹರಲಾಲ ನೆಹರು ಸಮಾರಂಭವು0ದರಲ್ಲಿ ಜಿನ್ನಾದು ಮುಗಿದು ಹೋದ ಅದ್ಯಾಯನ ಎಂದು ಟೀಕಿಸಿದ್ದರಿಂದ ೧೯೩೨ ರಲ್ಲಿ ಭಾರತಕ್ಕೆ ಮರಳಿ ಜವಹರಲಾಲ ನೆಹರುಗೆ ವಿರೋಧಿಸಲು ಮುಸ್ಲೀಮ್ ಲೀಗ್‌ಗೆ ಸೇರಿಕೊಂಡರು. ೧೯೪೪ ರಲ್ಲಿ ಗಾಂದೀಜಿಯವರು ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಜಿನ್ನಾರೊಂದಿಗೆ ಮಾತುಕತೆಗೆ ಮುಂದಾದರು. ಇದು ಜಿನ್ನಾನ ರಾಷ್ಟ್ರೀಯ ಪ್ರತೀಷ್ಠೆ ಹೆಚ್ಚಿಸಿತು. ಇದರಿಂದ ಜಿನ್ನಾಗೆ ಮತ್ತಷ್ಟು ಸ್ಪೂರ್ತಿ ಸಿಕ್ಕು ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಬಲವಾಗಿ ಪ್ರತಿಪಾದಿಸತೋಡಗಿದನು.

**೬.) ೧೯೪೬ ರ ಕ್ಯಾಬಿನೆಟ ಆಯೋಗ.**

ಎರಡನೇ ಮಹಾಯುದ್ದದ ನಂತರ ಇಂಗ್ಲೇ0ಡಿನ ಹೊಸ ಲೇಬರ ಪಕ್ಷದ ಸರಕಾರವು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಸಲುವಾಗಿ ಅದ್ಯಾಯನ ಮಾಡಲು ಆಯೋಗವನ್ನು ಕಳುಹಿಸಿತು. ಈ ಆಯೋಗದಲ್ಲಿ ಲಾರ್ಡ ಪೆಥಿಕ ಲಾರೆನ್ಸ್, ಸರ್ ಸ್ಟಾಫರ್ಡ ಕ್ರಿಪ್ಸ್, ಮತ್ತು ಎ.ವಿ ಅಲೆಗ್ಸಾಂಡರ್ ಇದ್ದು, ಇವರು ಭಾರತವನ್ನು ವಿಭಜನೆ ಮಾಡದೇ ಫೆಡರಲ್ ಮಾದರಿಯ ಸರಕಾರ ರಚನೆಗೆ ಶೀಫಾರಸ್ಸು ಮಾಡಿತು. ಈ ವರದಿಯನ್ನು ಮುಸ್ಲೀಮ್ ಲೀಗ್ ತಿರಸ್ಕರಿಸಿ ಪಾಕೀಸ್ತಾನದ ಬೇಡಿಕೆಯನ್ನು ಮುಂದುವರೆಸಿತು.

**೭.) ೧೯೪೬ ರ ಮಧ್ಯಂತರ ಸರಕಾರ.**

ಇಂಗ್ಲೇ0ಡಿನ ಪ್ರದಾನಿ ಆ್ಯಟ್ಲೆಯವರು ಭಾರತಕ್ಕೆ ಅಧಿಕಾರ ಮತ್ತು ಸ್ವಾತಂತ್ರ್ಯ ನೀಡಲು ಮುಸ್ಲೀಮ್ ಲೀಗ್ ಮತ್ತು ಕಾಂಗ್ರೇಸ್ ಒಳಗೊಂಡ ತಾತ್ಕಾಲಿಕ ಮದ್ಯಂತರ ಸರಕಾರ ರಚಿಸಲು ಸೂಚಿಸಿದರು. ಅದರಂತೆ ೧೯೪೬ ಸಪ್ಟಂಬರ ೦೨ ರಂದು ಮುಸ್ಲೀಮ್ ಲೀಗ್‌ನ ೫ ಜನ ಸದಸ್ಯರು  ಮತ್ತು ಕಾಂಗ್ರೇಸ್‌ನ ೭ ಜನ ಸದಸ್ಯರು ಒಟ್ಟು ೧೨ ಜನರ ಮಂತ್ರಿ ಮಂಡಲ ರಚಿಸಲಾಯಿತು. ಲೀಗ್ ನ ಸದಸ್ಯರು ಅನಾವಶ್ಯಕವಾಗಿ ಕಾಂಗ್ರೇಸಿಗೆ ತೊಂದರೆ ಕೊಡಲಾರಂಬಿಸಿದರು. ಸರಕಾರದೊಳಗೆ ಅರಾಜಕತೆ ಉಂಟುಮಾಡಿ ಸರಕಾರವನ್ನು ವಿಫಲಗೊಳಿಸುವದೇ ಅವರ ಗುರಿ ಯಾಗಿತ್ತು.

**೮.) ಕೋಮು ಪ್ರತಿಕ್ರಿಯೆ. (ಡೈರೆಕ್ಟ್ ಆಕ್ಷನ್ ಡೇ)**

ಮುಸ್ಲೀಮ್ ಲೀಗ್ ತನ್ನ ಪಾಕಿಸ್ತಾನದ ರಚನೆಯನ್ನು ಒತ್ತಾಯಿಸಲು ೧೯೪೬ ಅಗಸ್ಟ ೧೬ ರಂದು "ನೇರ ಕ್ರಮ ದಿನ " ವನ್ನಾಗಿ ಆಚರಿಸಲು ದೇಶದ ಮುಸ್ಲೀಮ್‌ರಿಗೆ ಕರೆ ನೀಡಿ, ದೇಸದ್ಯಾಂತ ಚಿಕ್ಕ ದೊಡ್ಡ ನಗರಗಳಲ್ಲಿ ಜಿಹಾದ ಘೋಷಣೆ ಮಾಡಿತು. ಈ ಸಂದರ್ಭದಲ್ಲಿ ಕಲ್ಕತ್ತ ನಗರವೂಂದರಲ್ಲಿ ೫ ಸಾವಿರ ಜನ ಕೊಲ್ಲಲ್ಪಟ್ಟರು. ಮುಂದೆ ಈ ಗಲಭೆ ಪೂರ್ವ ಬಂಗಾಲ, ಬಿಹಾರ, ಉತ್ತರಪ್ರದೇಶ, ಮತ್ತು ಪಂಜಾಬಿಗೂ ಹಬ್ಬಿತು. ಈ ಕೋಮುಗನಭೆಯಲ್ಲಿ ಸುಮಾರು ೨೦ ಸಾವಿರ ಜನ ಕೊಲೆಯಾದರು. ೫೦ ಸಾವಿರಜನ ಗಾಯಗೊಂಡರು. ೧ ಲಕ್ಷಕ್ಕೂ ಹೆಚ್ಚು ಜನ ತಮ್ಮ ಮನೆ, ಆಸ್ತಿ ಮತ್ತು ವ್ಯಾಪಾರವನ್ನು ಕಳೆದುಕೊಂಡು ಬೀದಿ ಪಾಲಾದರು.ಗಲಭೆಯನ್ನು ನಿಯಂತ್ರಿಸಬೇಕಾಗಿದ್ದ ಬಂಗಾಳದ ಸರಕರವು ತಾನೇ ಮುಂದೆ ನಿಂತು ದಂಗೆಕೋರರಿಗೆ ಪೆಟ್ರೋಲ್ ಮತ್ತು ಸೀಮೆ ಎಣ್ಣೆ ಸಿಗುವಂತೆ ಮಾಡಿ, ಗಲಭೆಹೆಚ್ಚಾಗುವಂತೆ ಮಾಡಿತು. ಇದರಿಂದ ಕಾಂಗ್ರೇಸ್ ನಾಯರಿಗೆ ಪಾಕಿಸ್ತಾನದ ರಚನೆ ಅನಿವರ್ಯವಾಯಿತು.

**೯.) ೧೯೪೭ ಫೆಬ್ರವರಿಯಲ್ಲಿ ಆ್ಯಟ್ಲೆಯವರ ಘೋಷಣೆ.**

ಗ್ರೇಟ್ ಬ್ರಿಟನ್ನಿನ ಪ್ರಧಾನಿ ಮಂತ್ರಿ ಕ್ಲೆಮಂಟ ಆ್ಯಟ್ಲಿಯವರು ತಮ್ಮ ಪಾರ್ಲಿಮೆಂಟನಲ್ಲಿ ೧೯೪೭ ರ ಪೆಭ್ರವರಿ ೨೦ ರಂದು ಭಾರತದ ಸ್ವಾತಂತ್ರ್ಯ ನೀಡುವ ನಿರ್ಧರವನ್ನು ಮತ್ತು ಬಾರತದ ವಿಭಜನೆಯು ಅನಿವರ್ಯವೆಂದು ಘೋಷಿಸಿತು. ಈ ಹೇಳಿಕೆ ಪ್ರಕಟಿಸಿದ ನಂತರ ಲಾರ್ಡ ವೆವಲ್ಲರ ಸ್ಥಾನದಲ್ಲಿ ಲಾರ್ಡ ಮೌಂಟ ಬ್ಯಾಟನರನ್ನು ಭಾರತದ ವೈಸರಾಯ್‌ರನ್ನಾಗಿ ನೇಮಿಸಲಾಯಿತು.

**೧೦.) ಲಾರ್ಡ ಮೌಂಟ ಬ್ಯಾಟನ್‌ರವರ ಯೋಜನೆ.**

ಅಖಂಡ ಭಾರತ ಕೋಮುಜ್ವಾಲೆಯಿಂದ ಉರಿಯುತ್ತಿರುವಾಗ ಕ್ರಿ.ಶ.೧೯೪೭ ಮಾರ್ಚ ೨೩ ರಂದು ಲಾರ್ಡ ಮೌಂಟ ಬ್ಯಾಟನ್ ವೈಸರಾಯ್ ಯಾಗಿ ದೆಹಲಿ ಬಂದರು. ಜೂನ್ ೨ ರಂದು ವಿಭಜನೆ ಕುರಿತು ಐತಿಹಾಸಿಕ ಮಹತ್ವದ ಸಭೆ ನಡೆಯಿತು. ಈ ಸಭೆಯಲ್ಲಿ ಕಾಂಗ್ರೇಸನ ಜೆ.ಬಿ.ಕೃಪಲಾನಿ, ಜವಾಹರ ನೆಹರು ಮತ್ತು ವಲ್ಲಭಬಾಯಿ ಪಟೇಲ್, ಹಾಗೂ ಮುಸೀಮ್‌ಲೀಗ್ ಪರವಾಗಿ ಮಹಮ್ಮದ್‌ಅಲಿಜಿನ್ನಾ, ಲಿಯಾಕತ್ ಅಲಿಖಾನ, ಅಬ್ದುಲ್‌ರಬ್‌ನಿಷ್ಟಾರ, ಶಿಖ್ ಸಮುದಾಯದ ಬಲದೇವ ಸಿಂಗ್ ಭಾಗವಹಿಸಿ ಸಮಾಲೋಚಿಸಿ ಯೋಜನೆ ಯೋಂದನ್ನು ರೂಪಿಸಲಾಯಿತು ಇದನ್ನು

ಲಾರ್ಡ ಮೌಂಟ ಬ್ಯಾಟನ್‌ರ ಯೋಜನೆ ಎಂದು ಕರೆಯಲಾಯಿತು. ಈ ಯೋಜನೆಯಂತೆ ಅಖಂಡ ಭಾರತವನ್ನು ವಿಭಜಿಸಲು ಮತ್ತು ಗಡಿರೇಖೆಯನ್ನು ನಿರ್ಧರಿಸಲು "ಸರ್ ರಾಡಕ್ಲೀಫ್ ನೇತೃತ್ವದ ಆಯೋಗ ರಚಿಸಲಾಯಿತು. ಬ್ರಿಟಿಷ ಸಂಸತ್ತು ೧೯೪೭ ಜುಲೈ ೪ ರಂದು

ಭಾರತದ ಸ್ವಾತಂತ್ರ್ಯ ಯ ಕಾಯ್ದೆಯನ್ನು ಪಾಸು ಮಾಡಿತು. ಈ ಶಾಸನದ ಪ್ರಕಾರ ಆಂಗ್ಲರ ಆಡಳಿತವು ಕೊನೆಗೊಂಡು ೧೯೪೭ ಅಗಸ್ಟ ೧೪ ರಂದು ಮದ್ಯರಾತ್ರಿ ಭಾರತ ಮತ್ತು ಪಾಕಿಸ್ತಾನ ಎಂಬ ಸ್ವಾತಂತ್ರ್ಯ ಯ ರಾಷ್ಟ್ರಗಳು ಉದಯಿಸಿದವು.

**ವಿಭಜನೆಯ ಪರಿಣಾಮಗಳು**

1. ಲಕ್ಷಾಂತರ ಹಿಂದೂಗಳನ್ನು ಪಾಕಿಸ್ತಾನಿ ಸೇನೆ ಮತ್ತು ಮುಸ್ಲಿಂ ಮೂಲಭೂತವಾದಿಗಳು ಕೊಂದು ಹಾಕಿದರು.
2. ಪಾಕಿಸ್ತಾನದಲ್ಲಿ ಉಳಿದ ಹಿಂದೂಗಳನ್ನು ವಿವಿಧ ರೀತಿಯಲ್ಲಿ ಹಿಂಸಿಸಲಾಯಿತು.
3. ಭಾರತದಲ್ಲಿ ಮತೀಯ ಗಲಭೆಗಳಿಂದ ಸಾವಿರಾರು ಮುಸ್ಲೀಂರು ಮರಣ ಹೊಂದಿದರು.
4. ಭಾರತ ಮತ್ತು ಪಾಕಿಸ್ತಾನಗಳು ನಾಲ್ಕು ಯುದ್ಧಗಳನ್ನು ಸೆಣೆಸಿವೆ.
5. ವಿಭಜನೆಯ ನಂತರ ಅಸ್ತಿತ್ವಕ್ಕೆ ಬಂದ ಎಲ್ಲ ನಾಲ್ಕು ರಾಷ್ಟ್ರಗಳೂ ಕಾಲಕಾಲಕ್ಕೆ ಅಂತಃಕಲಹ ಎದುರಿಸಬೇಕಾಗಿ ಬಂದಿದೆ:
   a. ೧೯೭೧ ರ ಬಾಂಗ್ಲಾದೇಶ ವಿಮೋಚನೆ ಯುದ್ಧ ಮತ್ತು ನಂತರ ೧೯೭೧ ರ ಭಾರತ-ಪಾಕಿಸ್ತಾನ ಯುದ್ಧ ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕೆ ಕಾರಣವಾದವು
   b. ಸಿಕ್ಕರ ಪ್ರತ್ಯೇಕತಾವಾದಿ ಖಲಿಸ್ತಾನ ಚಳುವಳಿ ೧೯೮೪ರಲ್ಲಿ ಆಪರೇಷನ್ ಬ್ಲೂ ಸ್ಟಾರ್ ಗೆ ಕಾರಣವಾಯಿತು
   c. ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕತಾವಾದ ಮತ್ತು ಪಾಕಿಸ್ತಾನ ಬೆಂಬಲಿತ ಉಗ್ರವಾದ
   d. ಪಾಕಿಸ್ತಾನದ ಮುಹಾಜಿರ್ ಚಳುವಳಿ